Office of the Principal Director,
Karnataka State Audit and Accounts Department,
3rd Floor, T.T.M.C. Building,
'A' Block, B.M.T.C., Shanthinagar,
Bengaluru-560 027.
Phone No:- 080- 22214817
Fax No.:- 080- 22216500
E-mail: controllerstateaccounts@yahoo.com

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
೩ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ,
'ಎ' ಬ್ಲಾಕ್, ಬಿ.ಎಂ.ಟಿ.ಸಿ., ಶಾಂತಿನಗರ,
ಬೆಂಗಳೂರು-೫೬೦ ೦೨೭
ದೂರವಾಣಿ ಸಂಖ್ಯೆ:- ೦೮೦- ೨೨೨೧೪೮೧೭
ಫ್ಯಾಕ್ಸ್ ಸಂಖ್ಯೆ:- ೦೮೦- ೨೨೨೧೬೫೦೦
ಇ-ಮೇಲ್: controllerstateaccounts@yahoo.com

ಸಂಖ್ಯೆ:ಸಿಎಸ್ಎ 02 ಇತರೆ 2022 /715 ದಿ:07-06-2022

## ಸುತ್ತೋಲೆ

ವಿಷಯ: ಕಛೇರಿಯ ಎಲ್ಲಾ ಪತ್ರಗಳು / ಪ್ರಸ್ತಾವನೆಯನ್ನು ಇ - ಆಫೀಸ್‌ನಲ್ಲಿ ಕಳುಹಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 24 ಪಿಆರ್‌ಜೆ 2020 ದಿ:18-01-2021 ಮತ್ತು 29-01-2021.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ರಾಲೆಪ 08 ಸಿಅಇ 2020 ದಿ:15-03-2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಸರ್ಕಾರದ ಆದೇಶಗಳಲ್ಲಿ ಇಲಾಖಾ ಮುಖ್ಯಸ್ಥರುಗಳ ಕಛೇರಿಗಳಲ್ಲಿ ಹಾಗೂ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ದಿನಾಂಕ:31-03-2021 ರೊಳಗೆ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಆದೇಶಿಸಲಾಗಿರುತ್ತದೆ.

ಉಲ್ಲೇಖ(2)ರ ಈ ಕಛೇರಿ ಸುತ್ತೋಲೆಯಲ್ಲಿ ಪ್ರಾಂತೀಯ ಕಛೇರಿಗಳು ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸುವಂತೆ ಆಯಾ ಕಛೇರಿಯ ನೋಡಲ್ ಅಧಿಕಾರಿಗಳಾದ ಕಛೇರಿ ಮುಖ್ಯಸ್ಥರು ಇವರಿಗೆ ಸೂಚಿಸಲಾಗಿರುತ್ತದೆ.

ಆದುದರಿಂದ, ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮ ಕಛೇರಿಯ ಸ್ವೀಕೃತ ಶಾಖೆಯಲ್ಲಿ ಸ್ವೀಕೃತಗೊಳ್ಳುವ ಎಲ್ಲಾ ಪತ್ರಗಳು / ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಶಾಖೆಯ ವಿಷಯ ನಿರ್ವಾಹಕರಿಗೆ ನೇರವಾಗಿ ಭೌತಿಕ ರೂಪದಲ್ಲಿ ತಲುಪಿಸದೇ ಕಡ್ಡಾಯವಾಗಿ ಇ – ಆಫೀಸ್ ಮುಖಾಂತರವೆ ಕಳುಹಿಸಲು ಸೂಚಿಸಲಾಗಿದೆ ಹಾಗೂ ಎಲ್ಲಾ ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ವೀಕೃತಗೊಳ್ಳುವ ಪತ್ರಗಳನ್ನು ಇ - ಆಫೀಸ್ ಮುಖಾಂತರವೇ ಸ್ವೀಕರಿಸಿ ಕಛೇರಿ/ಇಲಾಖಾ ಮುಖ್ಯಸ್ಥರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚಿಸಿದೆ.

ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು

**ಪ್ರತಿಯನ್ನು:**

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಂಗಳೂರು/ ಮೈಸೂರು/ ಬೆಳಗಾವಿ/ ಕಲಬುರಗಿ.
2. ಜಂಟಿ ನಿರ್ದೇಶಕರು/ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳು.
3. ತರಬೇತಿ ಶಾಖೆಗೆ ಅಂತರ್ಜಾಲದಲ್ಲಿ ಅಳವಡಿಸಲು.
4. ಕಛೇರಿ ಪ್ರತಿ.